ಆ) ೧೯೯೨-೯೩ನೇ ಸಾಲಿನ ಆಯವ್ಯಯದಲ್ಲಿ ಮೇಲ್ಕಾಣಿಸಿದ ಬ್ಯಾರೇಜ್ ನಿರ್ಮಾಣಕ್ಕೆ ಹಣ ಒದಗಿಸಲಾಗಿದೆಯೇ?

ಇ) ಯಾವ ಯಾವ ಬ್ಯಾರೇಜಿನ ನಿರ್ಮಾಣ ಮಾಡಲು ಸರಕಾರ ತೀರ್ಮಾನಿಸಿದೆ. ಅದಕ್ಕಾಗಿ ೧೯೯೨-೯೩ನೇ ಸಾಲಿನ ಆಯವ್ಯಯದಲ್ಲಿ ಒದಗಿಸಿದ ಹಣವೆಷ್ಟು?

ಶ್ರೀ ಕೆ. ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು):-

ಅ) ಬಂದಿದೆ.

ಆ) ಈ ಯೋಜನೆಗಳು ತಾಂತ್ರಿಕವಾಗಿ ಹಾಗೂ ಆರ್ಥಿಕವಾಗಿ ಶಕ್ಯವೆಂದು ಕಂಡುಬಂದಲ್ಲಿ ೧೯೯೨-೯೩ನೇ ಸಾಲಿನಲ್ಲಿ ಒದಗಿಸಲಾಗುವುದು.

ಇ) ಮೇಲ್ಕಾಣಿಸಿದ ಬ್ಯಾರೇಜುಗಳು ಆರ್ಥಿಕವಾಗಿ ಹಾಗೂ ತಾಂತ್ರಿಕವಾಗಿ ಶಕ್ಯವಿದ್ದಲ್ಲಿ ನಿರ್ಮಾಣ ಮಾಡಲು ತೀರ್ಮಾನಿಸಲಾಗುವುದು. ೧೯೯೨-೯೩ನೇ ಸಾಲಿನಲ್ಲಿ ಹೊಸ ಕಾಮಗಾರಿಗಳಿಗೆ ಒಟ್ಟು ಮೊತ್ತ ೩೯೧.೬೬ ಲಕ್ಷ ರೂ.ಗಳನ್ನು ಒದಗಿಸಲಾಗಿದೆ.

ಹುಬ್ಬಳ್ಳಿಯಲ್ಲಿ ವಾಯುದೂತ್ ವಿಮಾನ ನಿಲ್ದಾಣ

೧೪೧೨ (೨೦೪೬) ಶ್ರೀ ಮಂಜುನಾಥ ಸಿ. ಕುನ್ನೂರ (ಶಿಗ್ಗಾಂವ್):- ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಹುಬ್ಬಳ್ಳಿಯಲ್ಲಿ ವಾಯುದೂತ್ ವಿಮಾನ ನಿಲ್ದಾಣ ಪ್ರಾರಂಭವಾಗಿದೆಯೇ?

ಆ) ಸದರಿ ನಿಲ್ದಾಣಕ್ಕಾಗಿ ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರದಿಂದ ಎಷ್ಟು ಹಣ ಖರ್ಚು ಮಾಡಲಾಗಿದೆ?

ಇ) ಸದರಿ ವಿಮಾನ ನಿಲ್ದಾಣದಲ್ಲಿ ವಾಯುದೂತ್ ಸಂಚಾರ ಈವರೆಗೆ ಪ್ರಾರಂಭವಾಗದಿರುವುದಕ್ಕೆ ಕಾರಣಗಳೇನು?

ಈ) ಎಂದಿನಿಂದ ಸಂಚಾರವನ್ನು ಪ್ರಾರಂಭಿಸಲಾಗುವುದು?

ಶ್ರೀ ಜಿ. ಹೆಚ್. ಅಶ್ವತ್ಥ ರೆಡ್ಡಿ (ಲೋಕೋಪಯೋಗಿ ಮಂತ್ರಿಗಳು):-

ಅ) ಪ್ರಾರಂಭವಾಗಿತ್ತು.

ಆ) ಈ ಕಾಮಗಾರಿಯನ್ನು ರಾಜ್ಯ ಸರ್ಕಾರದ ನಿಧಿಯಿಂದ ತೆಗೆದುಕೊಳ್ಳಲಾಗಿದೆ. ಈ ವಿಮಾನ ನಿಲ್ದಾಣದ ನಿರ್ಮಾಣಕ್ಕಾಗಿ ೧೯೯೨ರ ಜನವರಿ ಅಂತ್ಯದವರೆಗೆ ೧೫೪೪.೩೧ ಲಕ್ಷ ರೂಪಾಯಿ ಖರ್ಚಾಗಿರುತ್ತದೆ ಹಾಗೂ ಈ ನಿಲ್ದಾಣ ವಿಸ್ತರಣೆಗಾಗಿ ೧೯೯೨ರ ಜನವರಿ ಅಂತ್ಯದವರೆಗೆ ೧೧೫.೮೪ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿರುತ್ತದೆ.

ಇ) ಈ ನಿಲ್ದಾಣದಲ್ಲಿ ಮೇ ೧೯೮೯ರಿಂದ ಡಿಸೆಂಬರ್ ೧೯೮೯ರವರೆಗೆ ಡಾರ್ನಿಯರ್ ವಿಮಾನದ ಸಂಚಾರವು ವಾಯುದೂತ್ ನಿಗಮದವರಿಂದ ನಡೆಸಲಾಗುತ್ತಿತ್ತು. ಈ ವಿಮಾನ ನಿಲ್ದಾಣದ ಬಳಿ ಇರುವ ೧೧೦ ಕಿ.ಹೈ. ವ್ಯಾಟ್ಸ್‌ನ ವಿದ್ಯುತ್ ತಂತಿಯಿಂದ ವಿಮಾನಯಾನಕ್ಕೆ ಅಡಚಣೆಯಾಗುವುದು ಹಾಗೂ ವಾಯುದೂತ್ ನಿಗಮದಲ್ಲಿ ವಿಮಾನಗಳ ಕೊರತೆಯಿದೆ, ಜನವರಿ ೧೯೯೨ರಲ್ಲಿ ಈ

ಸೇವೆಯನ್ನು ನಿಲ್ಲಿಸಲಾಗಿದೆ.

ಈ) ೧೧೦ ಕೆ. ವ್ಯಾಟ್ಸ್‌ನ ವಿದ್ಯುತ್ ತಂತಿಯನ್ನು ಸ್ಥಳಾಂತರಿಸಿದ ನಂತರ ಈ ಸಂಚಾರವನ್ನು ಪ್ರಾರಂಭಿಸುವ ಬಗ್ಗೆ ವಾಯುದೂತ್ ನಿಗಮದವರೊಂದಿಗೆ ವ್ಯವಹರಿಸಲಾಗುವುದು.

ಧಾರವಾಡ ಜಿಲ್ಲಾ ಪರಿಷತ್‌ನಿಂದ ಡಿ.ಪಿ.ಎ.ಡಿ. ಯೋಜನೆಯಡಿ ಪ್ರತಿ ತಾಲ್ಲೂಕಿಗೆ ಮಂಜೂರಾದ ಹಣ

೧೪೧೪ (೨೦೫೧) ಶ್ರೀ ಮಂಜುನಾಥ ಸಿ. ಕುನ್ನೂರು (ಶಿಗ್ಗಾಂವ):- ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತ್ ರಾಜ್ ಹಾಗೂ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಧಾರವಾಡ ಜಿಲ್ಲಾ ಪರಿಷತ್‌ನಿಂದ ಡಿಪಿಎಪಿ ಯೋಜನೆಯಡಿ ಜಿಲ್ಲಾ ಪರಿಷತ್ ಕಾರ್ಯ ನಿರ್ವಾಹಕ ಇಂಜಿನೀಯರಿಗೆ ಪ್ರತಿ ತಾಲ್ಲೂಕಿನಲ್ಲೂ ಎಷ್ಟು ಹಣ ಖರ್ಚು ಮಾಡಲಾಗಿದೆ ಹಾಗೂ ಎಷ್ಟು ಹಣ ಮಂಜೂರಾಗಿತ್ತು ?

ಆ) ಸದರಿ ಕಾಮಗಾರಿಗಳನ್ನು ಇಲಾಖೆ ವತಿಯಿಂದ ಪ್ರಾರಂಭಿಸಲಾಗಿದೆಯೆ ಅಥವಾ ಕಂಟ್ರಾಕ್ಟರರ ಮುಖಾಂತರ ಮಾಡಿಸಲಾಗಿದೆಯೇ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತ್ ರಾಜ್ ಹಾಗೂ ಕಂದಾಯ ಸಚಿವರು):-

ಅ) ಧಾರವಾಡ ಜಿಲ್ಲಾ ಪರಿಷತ್ ಕಾರ್ಯ ನಿರ್ವಾಹಕ ಇಂಜಿನೀಯರ್ ವಿಭಾಗದ ತಾಲ್ಲೂಕುಗಳಲ್ಲಿ ಡಿಪಿಎಪಿಯಲ್ಲಿ ಬಿಡುಗಡೆ ಮಾಡಿರುವ ಮತ್ತು ಖರ್ಚಾಗಿರುವ ಹಣದ ವಿವರಗಳನ್ನು ತೋರಿಸುವ ತಃಖ್ತೆ ಲಗತ್ತಿಸಿದೆ.

ಆ) ಕಾಮಗಾರಿಗಳನ್ನು ಇಲಾಖಾ ವತಿಯಿಂದ ತೆಗೆದುಕೊಳ್ಳಲಾಗಿದೆ.

ತಃಖ್ತೆ

ಜಿಲ್ಲೆ	ಕಾರ್ಯನಿರ್ವಾಹಕ ಇಂಜಿನಿಯರಿಂಗ್ ವಿಭಾಗ	ತಾಲ್ಲೂಕು	ಬಿಡುಗಡೆಯಾದ ಅನುದಾನ (ರೂ. ಲಕ್ಷಗಳಲ್ಲಿ)	ಖರ್ಚಾದ ಹಣ (ರೂ. ಲಕ್ಷಗಳಲ್ಲಿ) (ಫೆಬ್ರುವರಿ ೯೨ರ ಅಂತ್ಯದವರೆಗೆ)
ಧಾರವಾಡ	ಧಾರವಾಡ	ಧಾರವಾಡ	೩.೧೩೦	ಇಲ್ಲ
		ಹುಬ್ಬಳ್ಳಿ	೨.೦೩೬	೦.೧೩೨
		ಕಲಘಟಗಿ	೨.೮೮೪	೦.೯೫೮
		ಶಿಗ್ಗಾಂವ	೯.೮೧೩	೩.೮೯೭
		ಕುಂದಗೋಳ	೪.೪೦೦	ಇಲ್ಲ
			೨೨.೨೬೩	೪.೯೮೭